## ಕರ್ನಾಟಕ ಸರ್ಕಾರ

## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–1/ಡಿ.ಇ/387/2017/ಎ.ಆರ್.ಇ–11

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು–560001.
ದಿನಾಂಕ: 30ನೇ, ಸೆಪ್ಟೆಂಬರ್ 2023.

## –:: ಶಿಫಾರಸ್ಸು ::–

ವಿಷಯ: ಆಪಾದಿತ ಸರ್ಕಾರಿ ನೌಕರರಾದ (1) ಶ್ರೀ. ದತ್ತು ಘನತೆ, ದ್ವಿತೀಯ ದರ್ಜೆ ಸಹಾಯಕರು, ಮತ್ತು (2) ಶ್ರೀ. ಅಬ್ದುಲ್ ಖಾದರ್ ಜಿಲಾನಿ, ಅಧೀಕ್ಷಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಇಡಿ 203 ಯುಇಸಿ 2016, ಬೆಂಗಳೂರು, ದಿನಾಂಕ: 03/03/2017.
(2) ಉಪಲೋಕಾಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ.ಉಪಲೋಕ್–1/ಡಿಇ/387/2017, ಬೆಂಗಳೂರು, ದಿನಾಂಕ: 16/03/2017.
(3) ಅಪರ ನಿಬಂಧಕರು ವಿಚಾರಣೆಗಳು–11, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 30/09/2023.

*****

ಸರ್ಕಾರದ ಆದೇಶ ದಿನಾಂಕ: 03/03/2017 ರಂತೆ (1) ಶ್ರೀ. ದತ್ತು ಘನತೆ, ದ್ವಿತೀಯ ದರ್ಜೆ ಸಹಾಯಕರು, ಮತ್ತು (2) ಶ್ರೀ. ಅಬ್ದುಲ್ ಖಾದರ್ ಜಿಲಾನಿ, ಅಧೀಕ್ಷಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ ಇವರುಗಳ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ ಚಿಕ್ಕದಾಗಿ 'ಅ.ಸ.ನೌಕರರು 1 ಮತ್ತು 2' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು

ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್–1/ಡಿಇ/387/2017, ಬೆಂಗಳೂರು, ದಿನಾಂಕ: 16/03/2017ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು–11 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ (1) ಶ್ರೀ. ದತ್ತು ಘನತೆ, ದ್ವಿತೀಯ ದರ್ಜೆ ಸಹಾಯಕರು, ಮತ್ತು (2) ಶ್ರೀ. ಅಬ್ದುಲ್ ಖಾದರ್ ಜಿಲಾನಿ, ಅಧೀಕ್ಷಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ ಇವರುಗಳ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

## ಅನುಬಂಧ-1

## ದೋಷಾರೋಪಣೆ

ನೀವು ಎಂದರೆ ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ದತ್ತು ಘನತೆ ಕಲಬುರಗಿಯ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರವರ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ 2014ನೇ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವದಿಯಲ್ಲಿ ಮತ್ತು ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಅಬ್ದುಲ್ ಕಾದರ್ ಜಿಲಾನಿ ಆದ ನೀವು ಕಲಬುರಗಿಯ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರವರ ಕಛೇರಿಯಲ್ಲಿ ಕಛೇರಿ ಅಧೀಕ್ಷಕರಾಗಿ 2014ನೆಯ ಇಸವಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ದೂರುದಾರರಾದ ಶ್ರೀ ಟಿ. ಭೀಮಲಿಂಗಯ್ಯ ಬಿನ್ ಟಿ. ರಾಮಾಂಜನೇಯಲು ರವರು ಎಸ್.ಯೂ.ಬಿ.ಎನ್.ಟಿ.ಡಬ್ಲ್ಯು (ಮಹಿಳಾ) ಕಾಲೇಜು, ಹೊಸಪೇಟೆ, ಬಳ್ಳಾರಿ ಜಿಲ್ಲೆ ಇಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ 2013ನೆಯ ಇಸವಿಯಲ್ಲಿ ಬಡ್ತಿ ಹೊಂದಿದ್ದು, ಸದರಿಯವರಿಗೆ ರೂ.26,00,000/–ಗಳ ವೇತನ ಬಾಕಿ ಬರಬೇಕಾಗಿದ್ದು, ಸದರಿ ಬಿಲ್ಲುಗಳನ್ನು ಮಾಡಿಕೊಡುವ ಸಂಬಂಧಪಟ್ಟ ಒಂದನೆಯ ಆಪಾದಿತರಾದ ನೀವು ಮತ್ತು ಎರಡನೆಯ ಆಪಾದಿತರಾದ ನೀವುಗಳು ದೂರುದಾರರಿಂದ ಒಟ್ಟು ರೂ.17,500/–ಗಳನ್ನು ಮುಂಗಡವಾಗಿ ದಿನಾಂಕ:7–3–2014ರಂದು ಪಡೆದುಕೊಂಡಿದ್ದು, ದಿನಾಂಕ:18–3–2014ರಂದು ದೂರುದಾರರು ಆಪಾದಿತ ಸರ್ಕಾರಿ ನೌಕರರಾದ–1 ರವರಿಗೆ ಮೊಬೈಲ್‌ನಲ್ಲಿ ಕರೆ ಮಾಡಿದಾಗ ಆಪಾದಿತ ಸರ್ಕಾರಿ ನೌಕರರಾದ–1 ಮತ್ತು 2 ರವರು ಮೊಬೈಲ್‌ನಲ್ಲಿ ಮಾತನಾಡಿ ದಿನಾಂಕ:19–03–2014ರಂದು ಮತ್ತೆ ರೂ.22,500/–ಗಳನ್ನು ತರಬೇಕೆಂದು ಒತ್ತಾಯಿಸಿರುವ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿದ್ದು, ದಿನಾಂಕ

19-03-2014ರಂದು ದೂರು ಸಲ್ಲಿಸಿದ್ದು, ಆ ಸಂಬಂದವಾಗಿ ಕಲಬುರಗಿಯ ಲೋಕಾಯುಕ್ತ ಆರಕ್ಷಕ ಠಾಣೆಯ ಪ್ರಕರಣ ಸಂಖ್ಯೆ:01/2014ಕ್ಕೆ ಸಂಬಂದಪಟ್ಟಂತೆ ಎರಡನೆಯ ಆಪಾದಿತ ಸರ್ಕಾರಿ ನೌಕರರಾದ-2 ಆದ ಅಬ್ದುಲ್ ಖಾದರ್ ಜಿಲಾನಿ, ನೀವು ಫಿರ್ಯಾಧಿದಾರರಿಂದ ದಿನಾಂಕ:19-03-2014ರಂದು ಮದ್ಯಾಹ್ನ 1-10 ರಿಂದ 1-25ರ ಅವಧಿಯಲ್ಲಿ ರೂ.22,500/-ಗಳನ್ನು ಪಡೆದುಕೊಳ್ಳುವಾಗ ಸಿಕ್ಕಿಬಿದ್ದಿದ್ದು ಆ ಮೂಲಕ ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

4. ವಿಚಾರಣಾಧಿಕಾರಿಗಳಾದ (ಅಪರ ನಿಬಂಧಕರು ವಿಚಾರಣೆಗಳು-11), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ (1) ಶ್ರೀ. ದತ್ತು ಘನತೆ, ದ್ವಿತೀಯ ದರ್ಜೆ ಸಹಾಯಕರು, ಮತ್ತು (2) ಶ್ರೀ. ಅಬ್ದುಲ್ ಖಾದರ್ ಜಿಲಾನಿ, ಅಧೀಕ್ಷಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ ಇವರುಗಳ ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ವಿಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ನಾಲ್ವರು ಸಾಕ್ಷಿಯನ್ನು ಅಂದರೆ ಪಿ.ಡಬ್ಲ್ಯೂ-1 ರಿಂದ ಪಿ.ಡಬ್ಲ್ಯೂ-4 ರವರನ್ನು ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ-1 ರಿಂದ ಪಿ-15 ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ. ಆ.ಸ.ನೌಕರರು 1 ಮತ್ತು 2ರವರು ಡಿ.ಡಬ್ಲ್ಯೂ-1 ಮತ್ತು ಡಿ.ಡಬ್ಲ್ಯೂ-2 ಆಗಿ ವಿಚಾರಣೆಗೆ ಒಳಪಡಿಸಿಕೊಂಡು ನಿಶಾನೆ ಡಿ-1 ರಿಂದ ಡಿ-7 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. ಆ.ಸ.ನೌಕರರ 1 ಮತ್ತು 2ರವರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ,

ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ ಆ.ಸ.ನೌಕರರಾದ (1) ಶ್ರೀ. ದತ್ತು ಘನತೆ, ದ್ವಿತೀಯ ದರ್ಜೆ ಸಹಾಯಕರು, ಮತ್ತು (2) ಶ್ರೀ. ಅಬ್ದುಲ್ ಖಾದರ್ ಜಿಲಾನಿ, ಅಧೀಕ್ಷಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ ರವರ ವಿರುದ್ಧ ಹೊರಿಸಲಾದ ಆರೋಪಗಳಿಂದ 'ದೋಷಮುಕ್ತಗೊಳಿಸಲು' ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

7. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.

KARNATAKA LOKAYUKTA

No.UPLOK-1/DE.280/2016/ARE-11

Multi Storied Building,
Dr. B.R. Ambedkar Veedhi,
Bengaluru-560 001.
Dated 08.02.2022.

## RECOMMENDATION

Sub:- Departmental inquiry against Sri P.Mahanthesh, Clerk-cum-Typist, Office of Deputy Director of Public Instructions, Raichur District - reg.

Ref:- 1) Government Order No.ED 130 LIB 2016 dt.15.07.2016.

2) Nomination order No. UPLOK-1/DE.280/2016 dated 03.08.2016 of Upalokayukta, State of Karnataka.

3) Inquiry report dated 01.01.2022 of Additional Registrar of Enquiries-11, Karnataka Lokayukta, Bengaluru.

~~~~~

The Government by its order dated 15.07.2016 initiated the disciplinary proceedings against Sri P.Mahanthesh, Clerk-cum-Typist, Office of Deputy Director of Public Instructions, Raichur District, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination Order No. UPLOK-1/DE.280/2016 dated 03.08.2016 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO was tried for the charge of demanding and accepting bribe from the complainant for releasing advance amount for his operation and thereby committed misconduct.

4. The Inquiry Officer (Additional Registrar of Enquiries-11) has reported that, the DGO Sri P.Mahanthesh, Clerk-cum-Typist, Office of Deputy Director of Public Instructions, Raichur District, is dismissed vide order dated 20.02.2018 of the Disciplinary Authority and hence the present enquiry proceedings cannot be continued against him.

5. On re-consideration of the report of Inquiry Officer and taking note of the totality of the circumstances of the case, I do

not find any reason to interfere with the conclusions recorded by the Inquiry Officer.

6. Hence, it is hereby recommended to the Government to accept the report of Inquiry Officer ~~and to~~ stop the departmental inquiry against DGO Sri P.Mahanthesh, Clerk-cum-Typist, Office of Deputy Director of Public Instructions, Raichur District, for the present. The Competent Authority shall intimate this Institution, if the dismissal of DGO is set aside by the Competent Court in any appeal filed or to be filed by DGO and consequently he is reinstated into service, so as to proceed with the enquiry against him from the stage where it was stopped.

6. Action taken in the matter shall be intimated to this Authority.

Connected records are enclosed herewith.

8/2/22

**(JUSTICE B.S.PATIL)**
Upalokayukta,
State of Karnataka.